# ಪಾರಿಯ ಕೋರಿಕೆ



ಮೊಬೈಲ್ ಹಿಡಿದು
ಬಳಿ ಬಂದ ನನ್ನ ಪುಟ್ಟ ಮಗಳು ಪಾರಿ
ಪರದೆಯ ಮೇಲಿದ್ದ ದೊಡ್ಡ ಮರವನು ತೋರಿ
'ನಾನದ ನೋಡಬೇಕು' ಎಂದಳು.

ಹಾಲುಗಲ್ಲದ ಪುಟ್ಟ ಹುಡುಗಿಗೆ
ಬೆಟ್ಟದಂತಹ ಮರ ಕಾಣುವ ತವಕ!

ಶಹರದ ಕಿಟಕಿ ತೆರೆದರೆ
ಉದ್ದಕೆ ನಿಂತ ಕಟ್ಟಡಗಳ ದರ್ಶನ
ಬಾಗಿಲಿನಿಂದ ಬಾನ ದಿಟ್ಟಿಸಿದರೆ
ಕಪ್ಪು ಹೊಗೆಯ ನರ್ತನ

ಕಾರು ಹತ್ತಿ ಮರ ಅರಸಿ ಹೊರಟರೆ
ಎಲ್ಲೂ ದೈತ್ಯ ವೃಕ್ಷದ ಸುಳಿವಿಲ್ಲ!

ಸಣ್ಣ ಪರದೆಯ ಮೇಲೆ
ಕಂಡ ದೊಡ್ಡ ಮರಗಳನ್ನು
ಆಕೆ ಒಪ್ಪಲಿಲ್ಲ – ಅಂದಳು:
'ನೋಡಬೇಕು ನಾನು ಜೀವಂತ ಮರವನ್ನು
ಮುಟ್ಟಬೇಕು ಅದರ ಮೈಯ್ಯನ್ನು'

ಬೋನ್ಸಾಯ್ ಮರ ಪಾರಿಯ ಕೋರಿಕೆಗೆ ಉತ್ತರವಲ್ಲ
ಸಮಸ್ಯೆಗೆ ಪರಿಹಾರ ಗೂಗಲ್ ಕೂಡ ಹೇಳಲಿಲ್ಲ.

ಅಮ್ಮನಿಗೆ ಕರೆ ಮಾಡಿ
ಪಾರಿಯ ಬೇಡಿಕೆ ತಿಳಿಸಿದೆ
ನನ್ನ ಅಸಹಾಯಕತೆಯನ್ನು ಹಳಿದೆ.
ಅಂದಳು ಅಮ್ಮ:
'ಪಾರಿ ಸಸಿಯೊಂದ ನೆಟ್ಟು ಬೆಳಸಲಿ
ಅವಳ ಪರಿವಾರ ನೋಡಬಹುದು
ಮುಂದೊಂದು ದಿನ ದೈತ್ಯ ಮರವನ್ನು!'

● **ಎಂ.ಎನ್. ಯಶಸ್ವಿನಿ**

ಕಲೆ: ವಾಗೀಶ ಹೆಗಡೆ

